ಬಸವಕಲ್ಯಾಣ ತಾಲ್ಲೂಕಿನಲ್ಲಿ ರಸ್ತೆ ದೀಪಗಳಿಲ್ಲದಿರುವ ಬಗ್ಗೆ.

991. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ ರಸ್ತೆ ದೀಪಗಳಿಲ್ಲದಿರುವ ಗ್ರಾಮಗಳು ಎಷ್ಟು ;
ಆ) ದೀಪಗಳನ್ನು ಹಾಕಿಸದಿರಲು ಕಾರಣಗಳೇನು ;
ಇ) ಹಾಗಿದ್ದಲ್ಲಿ ಎಂದಿನಿಂದ ದೀಪಗಳನ್ನು ಹಾಕಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಇಲ್ಲ.
ಎಲ್ಲಾ ಗ್ರಾಮಗಳ ಮುಖ್ಯ ಬೀದಿಗಳು ಬೀದಿ ದೀಪಗಳ ಸೌಲಭ್ಯ ಹೊಂದಿರುತ್ತವೆ.
ಆ) ಪ್ರಶ್ನೆ 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.
ಇ) ನಿರ್ವಹಣೆ ಮತ್ತು ಸುಧಾರಣೆಗಳು ಸತತವಾಗಿ ನಡೆಯುತ್ತಿರುವ ಕಾರ್ಯಕ್ರಮಗಳು.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ.

992. ಶ್ರೀ ಬಸವರಾಜಪಾಟೀಲ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಸವಕಲ್ಯಾಣ 1987 ರಿಂದ 1992 ರವರೆಗೆ ಕುಡಿಯುವ ನೀರಿನ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಇನ್ನೂ ಎಷ್ಟು ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗಿದೆ;
ಆ) ಹಾಗಿದ್ದಲ್ಲಿ, ಎಂದಿನಿಂದ ಕೊರೆಯಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ 1987 ರಿಂದ 1992 ರವರೆಗೆ 213 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದ್ದು, ಅದರಲ್ಲಿ 185 ಕೊಳವೆ ಬಾವಿಗಳು ಸಫಲವಾಗಿರುತ್ತವೆ.
ಇನ್ನೂ 30 ಗ್ರಾಮಗಳಲ್ಲಿ 32 ಕೊಳವೆ ಬಾವಿಗಳನ್ನು ಕೊರೆಯಬೇಕಾಗಿದೆ.
ಆ) ಈಗಾಗಲೇ ಕೆಲಸವು ಪ್ರಗತಿಯಲ್ಲಿದೆ.

ಬೀದರ್ ಜಿಲ್ಲೆಯ ಕಾರಂಜಾ ಯೋಜನೆಗೆ ಕಾಡಾ ರಚನೆ

993. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯ ಕಾರಂಜ ನೀರಾವರಿ ಯೋಜನೆಗೆ ಕಾಡಾ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೆ;
ಆ) ಇದ್ದಲ್ಲಿ ಎಂದಿನಿಂದ ರಚಿಸಲಾಗುವುದು ಹಾಗೂ ಅದರ ಉದ್ದೇಶವೇನು ;
ಇ) ಪ್ರಸ್ತುತ ಆಯವ್ಯಯದಲ್ಲಿ ಯೋಜನೆಗೆ ಅನುದಾನ ದೊರೆತಿದೆಯೇ? ಹಾಗಿದ್ದಲ್ಲಿ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ?